# ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| **ವಿಷಯ** | **ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012ರ ಅನುಷ್ಠಾನದ ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು (State Level Advisory Committee) ರಚಿಸುವ ಕುರಿತು** |
| **ಓದಲಾಗಿದೆ** | **ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ: ಇಡಿ 77 ಯೋಯೋಕ 2010, ದಿನಾಂಕ 28.04.2012** |

ಪ್ರಸ್ತಾವನೆ:

1. ಮೇಲೆ ಓದಲಾದ ಅಧಿಸೂಚನೆಯಲ್ಲಿ, ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012 ಅನ್ನು ದಿನಾಂಕ 28.04.2012ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.
2. ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012 ಯಶಸ್ವಿ ಹಾಗೂ ರಚನಾತ್ಮಕ ಅನುಷ್ಠಾನ ಮತ್ತು ನೀತಿ ನಿರ್ದೇಶನಗಳ ಬಗ್ಗೆ ಕಾಲಕಾಲಕ್ಕೆ ಸೂಕ್ತ ಸಲಹೆಗಳನ್ನು ನೀಡುವ ಸಲುವಾಗಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು (State Level Advisory Committee)ಯನ್ನು ಅಧಿಸೂಚನೆ ಭಾಗ 3 ರ ಕಂಡಿಕೆ 22 ರಂತೆ ರಚಿಸಬೇಕಾಗಿದೆ.
3. ಮೇಲ್ಕಂಡ ಅಂಶಗಳ ಕುರಿತು ಪರಿಶೀಲಿಸಿ ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012 ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಸರ್ಕಾರದ ಮಟ್ಟದಲ್ಲಿ ಅದರಂತೆ ಈ ಕೆಳಕಂಡಂತೆ ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 28 ಮಾಹಿತಿ 2012, ಬೆಂಗಳೂರು ದಿನಾಂಕ: 15.01.2013**

4. ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012 ಯಶಸ್ವಿ ಹಾಗೂ ರಚನಾತ್ಮಕ ಅನುಷ್ಠಾನ ಮತ್ತು ನೀತಿ ನಿರ್ದೇಶನಗಳ ಬಗ್ಗೆ ಕಾಲಕಾಲಕ್ಕೆ ಸೂಕ್ತ ಸಲಹೆಗಳನ್ನು ನೀಡುವ ಸಲುವಾಗಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ರಚಿಸಲಾಗಿದೆ.

| ಕ್ರ.ಸಂ | ಉನ್ನತಾಧಿಕಾರ ಸಮಿತಿ ಸದಸ್ಯರುಗಳ ಪದನಾಮ | ಪದನಾಮ |
|---|---|---|
| 1. | ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ | ಪದನಿಮಿತ್ತ ಅಧ್ಯಕ್ಷರು |
| 2. | ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) | ಉಪಾಧ್ಯಕ್ಷರು |
| 3. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿಗಳು |
| 4. | ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 5. | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ | ಪದನಿಮಿತ್ತ ಸದಸ್ಯರು |
| 6. | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ | ಪದನಿಮಿತ್ತ ಸದಸ್ಯರು |

15/1/2013

| | | |
|---|---|---|
| 7. | ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 8. | ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 9. | ನಿರ್ದೇಶಕರು, ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 10. | ನಿರ್ದೇಶಕರು, ಉರ್ದು ಮತ್ತು ಅಲ್ಪ ಸಂಖ್ಯಾತ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 11. | ನಿರ್ದೇಶಕರು (ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 12. | ನಿರ್ದೇಶಕರು, ಆರ್‌ಎಂಎಸ್‌ಎ, ಬೆಂಗಳೂರು | ಪದನಿಮಿತ್ತ ಸದಸ್ಯರು |
| 13. | ಶ್ರೀ ಬಾಳಕೃಷ್ಣ ಜಾಯಪ್ಪ ಪೋಳ, ನಿವೃತ್ತ ಪ್ರಾಂಶುಪಾಲರು, ಧಾರವಾಡ | ಸದಸ್ಯರು |
| 14. | ಶ್ರೀ ತಿರಕಪ್ಪ ಫಕೀರಪ್ಪ ನಾಗಲಾವಿ, ನಿವೃತ್ತ ಉಪ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಕ್ಯಾರಕೊಪ್ಪ ಅಂಚೆ, ಧಾರವಾಡ ತಾಲ್ಲೂಕು, ಧಾರವಾಡ ಜಿಲ್ಲೆ. | ಸದಸ್ಯರು |
| 15. | ಶ್ರೀ ಬಾಲಕೃಷ್ಣ ಭಟ್, ಮಾಜಿ ಶಾಸಕರು, ಸುಗಂದಿ, ಗೋವಿಂದದಾಸ ಕಾಲೇಜಿನ ಹಿಂಬದಿ, ಸೂರತ್‌ಕಲ್, ಮಂಗಳೂರು – 9448503090 | ಸದಸ್ಯರು |
| 16. | ಶ್ರೀ ಎ.ಮರಿಯಪ್ಪ, ಕಾರ್ಯದರ್ಶಿಗಳು, ಕುಸುಮ, ನಂ.9, ವಿ.ವಿ.ರಸ್ತೆ, ವಿ.ವಿ.ಪುರಂ, ಬೆಂಗಳೂರು | ಸದಸ್ಯರು |
| 17. | ಶ್ರೀ ಎಲ್.ಆರ್.ಶಿವರಾಮೇಗೌಡ, ಮಾಜಿ ಶಾಸಕರು, ಕರ್ನಾಟಕ ರಾಜ್ಯ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಪೆಡರೇಷನ್ (KSPSMF), ಬೆಂಗಳೂರು | ಸದಸ್ಯರು |
| 18. | ಶ್ರೀ ಡಾ: ಕೆ. ಸಮೀರ ಸಿಂಹ, ಸಹ ಕಾರ್ಯದರ್ಶಿಗಳು, ವಿಜಯ ಕಾಲೇಜು ಶಿಕ್ಷಣ ಸಂಸ್ಥೆ, ಬೆಂಗಳೂರು | ಸದಸ್ಯರು |
| 19. | ಶ್ರೀ ಡಾ: ಸಂದೀಪ್ ನಾಯರ್, ಡೀನ್ ಅಕಾಡಿಮಿಕ್ಸ್, ಜೈನ್ ಕಾಲೇಜು ಆಫ್ ಎಂಬಿಎ & ಎಂಸಿಎ, ತಿಲಕ್‌ವಾಡಿ, ಖಾನಾಪುರ ರಸ್ತೆ, ಬೆಳಗಾವಿ– 590006 ಮತ್ತು ಮನೆ ಸಂಖ್ಯೆ, 270, ಮೊದಲನೆ ಹಂತ, ಆರ್‌ಸಿ ನಗರ, ಬೆಳಗಾಂ– 590006 | ಸದಸ್ಯರು |
| 20. | ಶ್ರೀ ಶ್ರೀನಿವಾಸ ನಂದಾಪುರ, 11–4–93, ಮಹವೀರ ಚೌಕ್, ರಾಯಚೂರು –584101 | ಸದಸ್ಯರು |

5. ರಾಜ್ಯ ಮಟ್ಟದ ಸಲಹಾ ಸಮಿತಿಯು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012 ರ ಯಶಸ್ವಿ ಅನುಷ್ಠಾನದ ಪ್ರಗತಿಗೆ 3 ತಿಂಗಳಿಗೊಮ್ಮೆ ಸಭೆಯನ್ನು ಸೇರಿ ರಚನಾತ್ಮಕ ಅನುಷ್ಠಾನ ಮತ್ತು ನೀತಿ ನಿರ್ದೇಶನಗಳನ್ನು ನೀಡುವುದು.
6. ರಾಜ್ಯ ಮಟ್ಟದ ಸಲಹಾ ಸಮಿತಿಯು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಅವಕಾಶ ವಂಚಿತ ಮಕ್ಕಳ ಗುರುತಿಸುವಿಕೆ ಹಾಗೂ 25% ಅಂತಹ ಮಕ್ಕಳನ್ನು ಅನುದಾನ ರಹಿತ ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಶಾಲೆಗಳಿಗೆ ದಾಖಲಾತಿ ಮಾಡುವ ಕುರಿತು ಮತ್ತು ಅಂತಹ ಮಕ್ಕಳ ವಿದ್ಯಾಭ್ಯಾಸಕ್ಕೆ ರಚನಾತ್ಮಕವಾದ ನಿಯಮಗಳನ್ನು ತಯಾರಿಸಲು & ನಿರ್ದೇಶನ ಸಲಹೆಗಳನ್ನು ನೀಡುವುದು.

15/1/2013

7. ರಾಜ್ಯ ಮಟ್ಟದ ಸಲಹಾ ಸಮಿತಿಯು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012 ರ ಯಶಸ್ವಿ ಅನುಷ್ಠಾನವನ್ನು ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಆಡಳಿತ ಮಂಡಳಿಯ ಮುಖ್ಯಸ್ಥರೊಂದಿಗೆ ಸಮಾಲೋಚನೆ ಸಭೆಗಳನ್ನು ನಡೆಸುವ ಮೂಲಕ ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012 ರ ಯಶಸ್ವಿ ಅನುಷ್ಠಾನಕ್ಕೆ ಸಂಪೂರ್ಣ ಸಹಕಾರವನ್ನು ಪಡೆಯುವುದು.
8. ರಾಜ್ಯ ಮಟ್ಟದ ಸಲಹಾ ಸಮಿತಿಯ (State Level Advisory Committee)ಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳಾದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು, 2012 ಯಶಸ್ವಿ ಅನುಷ್ಠಾನದ ಕುರಿತು ಸಮಿತಿಯ ಸಭೆಗಳನ್ನು ಮಾನ್ಯ ಶಿಕ್ಷಣ ಸಚಿವರ ಅನುಮತಿಯೊಂದಿಗೆ ನಿರ್ವಹಿಸುವುದು. ಸಮಿತಿಯ ಸಲಹೆಗಳ ವರದಿಯನ್ನು ಕಾಲಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸುವುದು.
9. ಸಮಿತಿಯಲ್ಲಿ ಭಾಗವಹಿಸುವ ಸರ್ಕಾರೇತರ ಸದಸ್ಯರಿಗೆ ಗೌರವಧನವನ್ನು ನಿಯಮಾನುಸಾರ ನೀಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಸೂಚಿಸಲಾಗಿದೆ. ಸದರಿ ಗೌರವಧನವನ್ನು ಹಾಗೂ ರಾಜ್ಯ ಮಟ್ಟದ ಸಲಹಾ ಸಮಿತಿಯ ಸಭೆಗಳ ವ್ಯವಸ್ಥೆಯನ್ನು ಸರ್ವ ಶಿಕ್ಷಣ ಅಭಿಯಾನದ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸಲು ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)
15/1/2013

ಪ್ರತಿ:

| | |
|---|---|
| 1. | ಮಹಾಲೇಕಪಾಲಕರು, ಕರ್ನಾಟಕ, ಬೆಂಗಳೂರು |
| 2. | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ. |
| 3. | ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸುತ್ತಾ ಸದರಿ ಆದೇಶದ ಸೂಚನೆಗಳಂತೆ ಶೀಘ್ರವಾಗಿ ಕ್ರಮ ವಹಿಸಲು ಕೋರಿದೆ. |
| 5. | ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು ರವರಿಗೆ ಕಳುಹಿಸುತ್ತಾ ಸದರಿ ಸಮಿತಿಯ ಕಲಾಪಗಳಿಗೆ ಸಂಪೂರ್ಣ ಸಹಕಾರವನ್ನು ಒದಗಿಸಲು ಕೋರಿದೆ. |
| 6. | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ |
| 7. | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ |
| 8. | ನಿರ್ದೇಶಕರು, ಡಿ.ಎಸ್.ಇ.ಆರ್.ಟಿ/ ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ/ ಉರ್ದು ಮತ್ತು ಅಲ್ಪ ಸಂಖ್ಯಾತ ಶಿಕ್ಷಣ / ಆರ್‌ಎಂಎಸ್‌ಎ/ ಎಸ್‌ಎಸ್‌ಎ (ಕಾರ್ಯಕ್ರಮಗಳು), ಬೆಂಗಳೂರು |